Village Administrative Officer Question Paper 04-10-2026

A1

ವರ್ಷನ್ ಸಂಕೇತ

ಸ್ಪರ್ಧಾತ್ಮಕ ಪರೀಕ್ಷೆ– 2026
ಪೂರ್ವಾಹ್ನ : ಪತ್ರಿಕೆ–1
ಒಟ್ಟು ಅವಧಿ (ಪರೀಕ್ಷಾ ಕೇಂದ್ರ ಪ್ರವೇಶ ಸೇರಿ) : **150** ನಿಮಿಷಗಳು
ಉತ್ತರಿಸಲು ಇರುವ ಗರಿಷ್ಠ ಅವಧಿ : **120** ನಿಮಿಷಗಳು
ಒಟ್ಟು ಪ್ರಶ್ನೆಗಳು : **100**/ಗರಿಷ್ಠ ಅಂಕಗಳು : **100**
ಸಮಯ : ಬೆಳಿಗ್ಗೆ **10.30** ರಿಂದ ಮಧ್ಯಾಹ್ನ **12.30** ರವರೆಗೆ
ವಿಷಯ : **ಸಾಮಾನ್ಯ ಜ್ಞಾನ**

SHIKARAT
shikarat.com
FREE EDUCATION FOR COMPETITIVE EXAMS

ಕ್ರಮ ಸಂಖ್ಯೆ : **222189**

ನಿಮ್ಮ ರಿಜಿಸ್ಟರ್ ನಂಬರ್ ಬರೆಯಿರಿ

1	3	8	7	2	9	4	4	5

ವಿಷಯ ಸಂಕೇತ: **NHKGA41026M**

ಅಭ್ಯರ್ಥಿಗಳಿಗೆ ಸೂಚನೆಗಳು

ಮಾಡಿ:

1. ಪ್ರವೇಶ ಪತ್ರದಲ್ಲಿದ್ದಂತೆ ನಿಮ್ಮ ರಿಜಿಸ್ಟರ್ ಸಂಖ್ಯೆ ಮತ್ತು ಹೆಸರನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಬರೆದಿರುವುದನ್ನು ಖಚಿತಪಡಿಸಿಕೊಳ್ಳಿ ಮತ್ತು ವ್ಯತ್ಯಾಸವಿದ್ದಲ್ಲಿ ಕೊಠಡಿ ಮೇಲ್ವಿಚಾರಕರಿಗೆ ತಿಳಿಸಿ.
2. ಕೊಠಡಿ ಮೇಲ್ವಿಚಾರಕರು ಪ್ರಶ್ನೆಪತ್ರಿಕೆಯನ್ನು ಮತ್ತು ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ನಿಮಗೆ **2ನೇ ಬೆಲ್ ಆದ ನಂತರ** ಕೊಡುತ್ತಾರೆ.
3. ಅಭ್ಯರ್ಥಿಗಳು ಈ ಪ್ರಶ್ನೆಪತ್ರಿಕೆಯಲ್ಲಿರುವ ವರ್ಷನ್ ಕೋಡ್ ಅನ್ನು, ನಿಮಗೆ ನೀಡಲಾದ ಓ.ಎಂ.ಆರ್. ಉತ್ತರ ಹಾಳೆಯ ನಿಗದಿತ ಜಾಗದಲ್ಲಿ ಸ್ಪಷ್ಟವಾಗಿ ಬರೆದು ಸಂಬಂಧಿಸಿದ ವೃತ್ತವನ್ನು ಶೇಡ್ ಮಾಡುವುದು.
4. ಈ ಪ್ರಶ್ನೆಪತ್ರಿಕೆಯಲ್ಲಿನ ವರ್ಷನ್ ಕೋಡ್ ಮತ್ತು ಕ್ರಮ ಸಂಖ್ಯೆಯನ್ನು ನಾಮಿನಲ್ ರೋಲ್‌ನಲ್ಲಿ ಯಾವುದೇ ತಪ್ಪಿಲ್ಲದಂತೆ ನಮೂದಿಸಬೇಕು.
5. ಓ.ಎಂ.ಆರ್. ಉತ್ತರ ಪತ್ರಿಕೆಯ ಕೆಳಭಾಗದ ನಿಗದಿತ ಜಾಗದಲ್ಲಿ ಕಡ್ಡಾಯವಾಗಿ ಸಹಿ ಮಾಡಬೇಕು.

ಮಾಡಬೇಡಿ:

- **ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಮುದ್ರಿತವಾಗಿರುವ ಟೈಮಿಂಗ್ & ಮಾರ್ಕನ್ನು ತಿದ್ದಬಾರದು / ಹಾಳುಮಾಡಬಾರದು / ಅಳಿಸಬಾರದು.**

ಅಭ್ಯರ್ಥಿಗಳಿಗೆ ಪ್ರಮುಖ ಸೂಚನೆಗಳು

1. ಪ್ರಶ್ನೆಗಳಲ್ಲಿ ಬಳಸಿರುವ signs and symbols ಗಳನ್ನು, ಬೇರೆ ರೀತಿಯಲ್ಲಿ ಹೇಳದ ಹೊರತು, ನಿಗದಿತ ಪಠ್ಯಪುಸ್ತಕದಲ್ಲಿನ ಅರ್ಥವನ್ನು ಪರಿಗಣಿಸಬೇಕು.
2. ಪ್ರಶ್ನೆಪತ್ರಿಕೆಯಲ್ಲಿ ಒಟ್ಟು **100** ಪ್ರಶ್ನೆಗಳಿದ್ದು, ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಪ್ರತಿಯೊಂದು ಪ್ರಶ್ನೆಗೂ ಐದು ಆಯ್ಕೆಗಳು/ ವೃತ್ತಗಳನ್ನು ನೀಡಲಾಗಿದ್ದು, ಮೊದಲ ನಾಲ್ಕು ಆಯ್ಕೆಗಳು/ ವೃತ್ತಗಳು 1, 2, 3 ಮತ್ತು 4 ಸೂಕ್ತ ಉತ್ತರವನ್ನು ಶೇಡ್ ಮಾಡಲು ಮತ್ತು **ಆ ಪ್ರಶ್ನೆಯನ್ನು ಉತ್ತರಿಸದಿದ್ದಲ್ಲಿ 5 ನೇ ಆಯ್ಕೆ/ವೃತ್ತ 5 ಅನ್ನು ಶೇಡ್ ಮಾಡಲು ತಿಳಿಸಿದೆ.**
3. **3ನೇ ಬೆಲ್ ಆದ ನಂತರ** ಈ ಪ್ರಶ್ನೆಪತ್ರಿಕೆಯ ಬಲಭಾಗದಲ್ಲಿರುವ ಸೀಲ್‌ನ್ನು ತೆಗೆಯುವುದು ಹಾಗೂ ಯಾವುದೇ ಪುಟಗಳು ಮುದ್ರಿತವಾಗಿಲ್ಲದಿರುವುದು, ಯಾವುದೇ ಪುಟಗಳು ಹರಿದು ಹೋಗಿರುವುದು, ಇಲ್ಲವೇ ಹಾಳಾಗಿರುವುದು ಕಂಡುಬಂದಲ್ಲಿ ಅಥವಾ ಯಾವುದೇ ಅಕ್ಷರಗಳು ಬಿಟ್ಟು ಹೋಗಿದ್ದಲ್ಲಿ ಪರೀಕ್ಷೆ ಪ್ರಾರಂಭವಾದ ಐದು (05) ನಿಮಿಷಗಳೊಳಗೆ ಸಂಪೂರ್ಣ ಪ್ರಶ್ನೆಪತ್ರಿಕೆಯನ್ನು ಬದಲಾಯಿಸಿಕೊಳ್ಳುವುದು. ನಂತರವೇ ಪ್ರತಿಯೊಂದು ಪ್ರಶ್ನೆಗಳನ್ನು ಎಚ್ಚರಿಕೆಯಿಂದ ಓದಿ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಉತ್ತರಿಸಲು ಪ್ರಾರಂಭಿಸುವುದು.
4. ಪ್ರಶ್ನೆಪತ್ರಿಕೆಯಲ್ಲಿನ ಪ್ರಶ್ನೆಗೆ ಅನುಗುಣವಾಗಿರುವ ಸರಿ ಉತ್ತರವನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಅದೇ ಪ್ರಶ್ನೆ ಸಂಖ್ಯೆಯ ಮುಂದೆ ನೀಡಿರುವ ಸಂಬಂಧಿಸಿದ ವೃತ್ತವನ್ನು ನೀಲಿ ಬಾಲ್‌ಪಾಯಿಂಟ್ ಪೆನ್‌ನಿಂದ ಸಂಪೂರ್ಣವಾಗಿ ತುಂಬುವುದು.

ಸರಿಯಾದ ಉತ್ತರಿಸುವ ಕ್ರಮ	ತಪ್ಪು ಕ್ರಮಗಳು		
① ● ③ ④ ⑤	⊗ ② ③ ④ ⑤	① ② ③ ④ ⑤	① ② ③ ④ ⑤
	① ● ③ ④ ●	① ② ③ ④ ⑤	① ② ③ ④ ⑤
			① ② ③ ④ ⑤

5. ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಸ್ಕ್ಯಾನ್ ಮಾಡುವ ಸ್ಕ್ಯಾನರ್ ಬಹಳ ಸೂಕ್ಷ್ಮವಾಗಿದ್ದು ಸಣ್ಣ ಗುರುತನ್ನು ಸಹ ದಾಖಲಿಸುತ್ತದೆ. ಆದ್ದರಿಂದ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಉತ್ತರಿಸುವಾಗ ಎಚ್ಚರಿಕೆ ವಹಿಸಿ.
6. ಪ್ರಶ್ನೆಪತ್ರಿಕೆಯಲ್ಲಿ ಕೊಟ್ಟಿರುವ ಖಾಲಿ ಜಾಗವನ್ನು ಕಚ್ಚಾ ಕೆಲಸಕ್ಕೆ ಉಪಯೋಗಿಸಿ. ಓ.ಎಂ.ಆರ್. ಉತ್ತರಪತ್ರಿಕೆಯನ್ನು ಇದಕ್ಕೆ ಉಪಯೋಗಿಸಬೇಡಿ.
7. **ಕೊನೆಯ ಬೆಲ್ ಆದ ನಂತರ ಉತ್ತರಿಸುವುದನ್ನು ನಿಲ್ಲಿಸಿ, ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಯಥಾಸ್ಥಿತಿಯಲ್ಲಿ ನೀಡಿರಿ.**
8. ಕೊಠಡಿ ಮೇಲ್ವಿಚಾರಕರು ಓ.ಎಂ.ಆರ್. ಮೇಲ್ಭಾಗದ ಹಾಳೆಯನ್ನು ಪ್ರತ್ಯೇಕಿಸಿ (ಕಚೇರಿ ಪ್ರತಿ) ತಮ್ಮ ವಶದಲ್ಲಿಟ್ಟುಕೊಂಡು ಹಿಂಬದಿಯ ಯಥಾಪ್ರತಿಯನ್ನು (ಅಭ್ಯರ್ಥಿಯ ಪ್ರತಿ) ಅಭ್ಯರ್ಥಿಗಳಿಗೆ ಕೊಡುತ್ತಾರೆ.
9. ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳಿರುತ್ತದೆ.
10. ಯಾವುದೇ ರೀತಿಯ ಮೊಬೈಲ್ ಫೋನ್, ಕ್ಯಾಲ್‌ಕ್ಯುಲೇಟರ್ ಮತ್ತು ಇತರೆ ರೀತಿಯ ಎಲೆಕ್ಟ್ರಾನಿಕ್/ಕಮ್ಯುನಿಕೇಷನ್ ಸಾಧನಗಳು ಇತ್ಯಾದಿಗಳನ್ನು ಪರೀಕ್ಷಾ ಕೇಂದ್ರದ ಆವರಣದೊಳಗೆ ತರುವುದನ್ನು ನಿಷೇಧಿಸಿದೆ.
11. ಅಭ್ಯರ್ಥಿಗಳು ಮದ್ಯ, ಮಾದಕ ದ್ರವ್ಯ ಅಥವಾ ಇನ್ಯಾವುದೇ ಮಾದಕ ವಸ್ತು ಸೇವನೆಯ ಪ್ರಭಾವದಲ್ಲಿ ಪರೀಕ್ಷಾ ಕೇಂದ್ರವನ್ನು ಪ್ರವೇಶಿಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಒಂದು ವೇಳೆ ಅಭ್ಯರ್ಥಿಯು ಮದ್ಯಪಾನ ಮಾಡಿದ ಸ್ಥಿತಿಯಲ್ಲಿ ಅಥವಾ ಮೇಲೆ ಉಲ್ಲೇಖಿತವಾದ ನಿಷೇಧಿತ ವಸ್ತುಗಳನ್ನು ಸೇವಿಸಿರುವುದು ಕಂಡುಬಂದರೆ, ತಕ್ಷಣವೇ ಅವರನ್ನು ಪರೀಕ್ಷಾ ಕೇಂದ್ರದಿಂದ ಹೊರಹಾಕಲಾಗುವುದು
12. **ಋಣಾತ್ಮಕ ಮೌಲ್ಯಮಾಪನವಿದ್ದು, ಪ್ರತಿ ತಪ್ಪು ಉತ್ತರಕ್ಕೆ 1/4 ರಷ್ಟು (0.25) ಅಂಕಗಳನ್ನು ಕಳೆಯಲಾಗುವುದು.**
13. **ಸರಿಯಾದ ಉತ್ತರ ಗೊತ್ತಿಲ್ಲದ್ದಿದರೆ ಕಡ್ಡಾಯವಾಗಿ 05ನೇ ವೃತ್ತವನ್ನು ಶೇಡ್ ಮಾಡತಕ್ಕದ್ದು, ಇದಕ್ಕಾಗಿ ಪರೀಕ್ಷಾ ಅವಧಿ ನಂತರ 05 ನಿಮಿಷ ಸಮಯಾವಕಾಶ ನೀಡಲಾಗುವುದು. ಯಾವುದೇ ಆಯ್ಕೆಯನ್ನು/ವೃತ್ತವನ್ನು ಶೇಡ್ ಮಾಡಿಲ್ಲದಿದ್ದರೆ, ಪ್ರತಿ ಪ್ರಶ್ನೆಗೆ 1/4 ರಷ್ಟು (0.25) ಅಂಕಗಳನ್ನು ಕಡಿತಗೊಳಿಸಲಾಗುವುದು.**

ಸೂಚನೆ: ಪ್ರಶ್ನೆಪತ್ರಿಕೆಯಲ್ಲಿನ ಯಾವುದಾದರೂ ಪ್ರಶ್ನೆಯ ಬಗ್ಗೆ ಸಂದೇಹ ಉಂಟಾದಲ್ಲಿ ಕನ್ನಡ/ಇಂಗ್ಲೀಷ್ ಭಾಗವನ್ನು ನೋಡುವುದು.

SHIKARAT.COM

COMPETITIVE EXAMINATION-2026
Morning Session : PAPER-1
TOTAL DURATION
(Including entry to the examination centre) : 150 Minutes
Maximum Time For Answering : 120 Minutes
Total Number of Questions : 100 / Maximum Marks : 100
Time : 10.30 AM TO 12.30 PM
Subject : GENERAL KNOWLEDGE

A1

VERSION CODE

MENTION YOUR REGISTER NUMBER

SHIKARAT
shikarat.com
FREE EDUCATION FOR COMPETITIVE EXAMS

Subject Code	NHKGA41026M

INSTRUCTIONS FOR CANDIDATES

DOs:

1. Candidate must verify that the Register number & Name printed on the Admission ticket is tallying with the Register number and Name written on the OMR Answer sheet. Discrepancy if any, report to invigilator.
2. This question booklet is issued to you by the invigilator **after the 2nd Bell.**
3. Candidate must write and shade the version Code of this question Booklet on the OMR Answer Sheet and verify that is tallying with the Version code printed on this question Booklet. Discrepancy if any, report to invigilator.
4. The Version Code and Serial Number of this question booklet should also be entered on the Nominal Roll without any mistakes.
5. Compulsorily sign at the bottom portion of the OMR answer sheet in the space provided.

DON'Ts:

A1

- **THE TIMING AND MARKS PRINTED ON THE OMR ANSWER SHEET SHOULD NOT BE DAMAGED / MUTILATED / SPOILED.**

IMPORTANT INSTRUCTIONS TO CANDIDATES

1. In case of usage of signs and symbols in the questions, the regular textbook connotation should be considered unless stated otherwise.
2. This question booklet contains 100 questions and In the OMR Answer sheet, five options/circles are given in each question. First four options/circles 1, 2, 3 and 4 are for marking appropriate answers. **For unanswered question shade the 5th option/circle.**
3. After the 3rd Bell rings, remove the paper seal of this question booklet and check that this booklet does not have any unprinted or torn or missing pages or items etc., if so, get it replaced by a complete test booklet within 5 minutes of the commencement of exam. Read each item and start answering on the OMR answer sheet.
4. Completely **darken / shade** the relevant circle with a **blue ink ballpoint pen against the question number on the OMR answer sheet.**

CORRECT ANSWERING METHOD	WRONG METHODS		
① ● ③ ④ ⑤	⊗ ② ③ ④ ⑤ / ① ② ③ ④ ⑤	① ② ③ ④ ⑤ / ① ② ③ ④ ⑤	① ② ③ ④ ⑤ / ① ② ③ ④ ⑤ / ① ② ③ ④ ⑤

5. Please note that even a minute unintended ink dot on the OMR answer sheet will also be recognized and recorded by the scanner. Therefore, avoid multiple markings of any kind on the OMR answer sheet.
6. Use the space provided on each page of the question booklet for Rough Work. Do not use the OMR answer sheet for the same.
7. **Once the last Bell rings,** stop writing on the OMR answer sheet and hand over the **OMR answer sheet** to the room invigilator as it is.
8. After separating the OMR top sheet (Office copy), the invigilator will return the bottom sheet replica (Candidate's copy) to you.
9. All questions carry equal marks.
10. Use of Mobile Phones, Calculators and other Electronic/Communication gadgets of any kind is prohibited inside the Examination venue.
11. It is strictly prohibited for candidates to enter an examination centre under the influence of alcohol, drugs or any other intoxication. If a candidate found in an intoxicated state or under the influence of the above mentioned prohibited items will be immediately expelled from examination centre.
12. **There is a negative valuation, ¼th (0.25) of marks will be deducted for each wrong answer.**
13. **If the correct answer is not known, it is mandatory to shade the 05th circle. Additional 05 minutes will be given for this after the duration of examination. If no option/circle is shaded, ¼th (0.25) marks will be deducted for each question.**

NOTE: In case of any discrepancy in the question paper, please refer Kannada/English Version.

SHIKARAT.COM

A1

1. ಗಂಗರ ಕಾಲದ ಸ್ಮಾರಕಗಳನ್ನು ಹೊಂದಿಸಿ ಬರೆಯಿರಿ.

ಪಟ್ಟಿ-I (ಸ್ಥಳಗಳು)		ಪಟ್ಟಿ-II (ದೇವಾಲಯಗಳು)
(a) ತಲಕಾಡು	(i)	ಕಪಿಲೇಶ್ವರ ದೇವಾಲಯ
(b) ಮಣ್ಣೆ	(ii)	ನಾಗೇಶ್ವರ ದೇವಾಲಯ
(c) ಬೇಗೂರು	(iii)	ಪಂಚಕೂಟ ಬಸದಿ
(d) ಕಂಬದಹಳ್ಳಿ	(iv)	ಪಾತಾಳೇಶ್ವರ ದೇವಾಲಯ

ಸಂಕೇತಗಳು:

(1) a – i, b – ii, c – iv, d – iii

(2) a – i, b – iv, c – ii, d – iii

(3) a – iv, b – i, c – ii, d – iii

(4) a – iv, b – i, c – iii, d – ii

2. 'ಗರುಡ'ರೆಂಬ ವಿಶೇಷ ಅಂಗ ರಕ್ಷಕ ದಳವನ್ನು ಹೊಂದಿದ್ದ ರಾಜವಂಶ _____

(1) ರಾಷ್ಟ್ರಕೂಟರು

(2) ಚೋಳರು

(3) ಹೊಯ್ಸಳರು

(4) ಗಂಗರು

3. ದಕ್ಷಿಣದ ಸಂಗೀತ ಪದ್ಧತಿಯನ್ನು 'ಕರ್ನಾಟಕ ಸಂಗೀತ' ಎಂದು ಪ್ರಥಮವಾಗಿ ಉಲ್ಲೇಖಿಸಿರುವ ಗ್ರಂಥ _____

(1) ವಿಕ್ರಮಾಂಕದೇವಚರಿತ

(2) ಕವಿರಾಜಮಾರ್ಗ

(3) ಸಂಗೀತ ಚೂಡಾಮಣಿ

(4) ಅಭಿಲಾಷಿತಾರ್ಥ ಚಿಂತಾಮಣಿ

ಕಚ್ಚಾ ಕೆಲಸಕ್ಕೆ ಸ್ಥಳ

SHIKARAT.COM

1. Match the following Gangas monuments:

List – I (Places)	List – II (Temples)
(a) Talakadu	(i) Kapileshwara Temple
(b) Manne	(ii) Nageshwara Temple
(c) Beguru	(iii) Panchakuta Basadi
(d) Kambadahalli	(iv) Pataleshwara Temple

Codes:

(1) a – i, b – ii, c – iv, d – iii

(2) a – i, b – iv, c – ii, d – iii

(3) a – iv, b – i, c – ii, d – iii

(4) a – iv, b – i, c – iii, d – ii

2. A royal dynasty that had a special wing of bodyguards called 'Garuda' is

(1) Rashtrakutas

(2) Cholas

(3) Hoysalas

(4) Gangas

3. The book that first referred to the music system of south as 'Carnatic music' is _____

(1) Vikramankadevacharitha

(2) Kavirajamarga

(3) Sangeetha Chudamani

(4) Abhilashithartha Chinthamani

SPACE FOR ROUGH WORK

SHIKARAT.COM

4. ಕರ್ನಾಟಕದ ಯಾವ ವ್ಯಕ್ತಿಗೆ ಕೆಳಗೆ ನೀಡಲಾದ ಹೇಳಿಕೆಗಳು ಸಂಬಂಧಿಸಿವೆ?

(a) ಅವರು ಮೈಸೂರು ಸಿವಿಲ್ ಸರ್ವೀಸ್ ಪರೀಕ್ಷೆಯನ್ನು ಪ್ರಜಾಪ್ರತಿನಿಧಿ ಸಭೆಯಲ್ಲಿ ಬಲವಾಗಿ ವಿರೋಧಿಸಿದರು.

(b) ಅವರು ಮೈಸೂರಿನಲ್ಲಿ ದೇಶಭಕ್ತಿ ಮೂಡಿಸಲು ಮೈಸೂರು ಹೆರಾಲ್ಡ್ ಪತ್ರಿಕೆ ಸೇರಿದಂತೆ ಹತ್ತಕ್ಕೂ ಹೆಚ್ಚು ಪತ್ರಿಕೆಗಳನ್ನು ಆರಂಭಿಸಿದರು.

(c) ಅವರು ಮೈಸೂರಿನಲ್ಲಿ ಕರ್ನಾಟಕ ಏಕೀಕರಣ ಚಳವಳಿಯ ನೇತೃತ್ವ ವಹಿಸಿದ್ದರು.

(d) ಅವರು ಮೈಸೂರಿನ ಪಿತಾಮಹ ಎಂದು ಹೆಸರಾಗಿದ್ದರು.

(1) ಕೆ. ರಂಗ ಅಯ್ಯಂಗಾರ್ (2) ಕಡಪ ರಾಘವೇಂದ್ರರಾವ್

(3) ತಗಡೂರು ರಾಮಚಂದ್ರರಾವ್ (4) ಎಂ. ವೆಂಕಟಕೃಷ್ಣಯ್ಯ

5. ಕದಂಬರ ಶಾಸನಗಳು ದೊರೆತ ಸ್ಥಳಗಳನ್ನು ಗುರುತಿಸಿ.

(a) ತಾಳಗುಂದ

(b) ಮಹಾಕೂಟ

(c) ಗುಡ್ನಾಪುರ

(d) ಚಂದ್ರವಳ್ಳಿ

(1) (a) ಮತ್ತು (b) ಮಾತ್ರ (2) (a) ಮತ್ತು (c) ಮಾತ್ರ

(3) (a), (c) ಮತ್ತು (d) ಮಾತ್ರ (4) (a), (b), (c) ಮತ್ತು (d)

6. ಮಹಿಳಾ ಸಂಘಟನೆಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಜೋಡಿಗಳನ್ನು ಪರಿಗಣಿಸಿ:

(a) ಸರಳಾ ಬಾಲಾದೇವಿ - ಭಾರತ್ ಸ್ತ್ರೀ ಮಂಡಲ

(b) ರಮಾಬಾಯಿ - ಪೂನಾ ಸೇವಾ ಸದನ

(c) ಆ್ಯನಿ ಬೆಸೆಂಟ್ - ವುಮೆನ್ಸ್ ಇಂಡಿಯಾ ಅಸೋಸಿಯೇಷನ್

(d) ಉಷಾ ಮೆಹ್ತಾ - ನಾರಿ ಸತ್ಯಾಗ್ರಹ ಸಂಘ

ಮೇಲಿನ ಎಷ್ಟು ಜೋಡಿಗಳು ಸರಿಯಾಗಿ ಹೊಂದಿಕೆಯಾಗಿವೆ?

(1) ಒಂದು ಮಾತ್ರ (2) ಎರಡು ಮಾತ್ರ

(3) ಮೂರು ಮಾತ್ರ (4) ಎಲ್ಲಾ ನಾಲ್ಕು

ಕಚ್ಚಾ ಕೆಲಸಕ್ಕೆ ಸ್ಥಳ

SHIKARAT
shikarat.com
FREE EDUCATION FOR COMPETITIVE EXAMS

SHIKARAT.COM

4. To which of the following personalities from Karnataka, the below given statements are related?

(a) He strongly opposed Mysore Civil Service examination in representative assembly.

(b) He started more than ten newspapers including Mysore Herald to inculcate patriotism in Mysore.

(c) He led the Karnataka Unification Movement in Mysore.

(d) He was known as the Grand Old Man of Mysore.

(1) K. Ranga Ayengar

(2) Kadapa Raghavendra Rao

(3) Tagadur Ramachandra Rao

(4) M. Venkatakrishnaiah

5. Identify the places where Kadamba inscriptions were found:

(a) Talagunda

(b) Mahakuta

(c) Gudnapura

(d) Chandravalli

(1) Only (a) and (b)

(2) Only (a) and (c)

(3) Only (a), (c) and (d)

(4) (a), (b), (c) and (d)

6. Consider the following pairs with reference to women's organisations:

(a)	Sarala Baladevi	–	Bharat Stree Mandal
(b)	Ramabai	–	Poona Seva Sadan
(c)	Annie Besant	–	Women's India Association
(d)	Usha Mehta	–	Nari Satyagraha Sangh

How many of the above pairs are correctly matched?

(1) Only one

(2) Only two

(3) Only three

(4) All the four

SPACE FOR ROUGH WORK

SHIKARAT.COM

A1

7. ಕರ್ನಾಟಕದಲ್ಲಿ ಸ್ವಾತಂತ್ರ್ಯ-ಪೂರ್ವ ಸಾಮಾಜಿಕ ಸಂಘಟನೆಗಳಿಗೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಯಾವುದು ತಪ್ಪಾಗಿದೆ?

(1) 1904ರಲ್ಲಿ ವೀರಶೈವ ಮಹಾಸಭಾ ಸ್ಥಾಪನೆಯಾಯಿತು

(2) 1906ರಲ್ಲಿ ಒಕ್ಕಲಿಗರ ಸಂಘ ಸ್ಥಾಪನೆಯಾಯಿತು

(3) 1917ರಲ್ಲಿ ಪ್ರಜಾಮಿತ್ರಮಂಡಳಿ ಸ್ಥಾಪನೆಯಾಯಿತು

(4) 1915ರಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಸ್ಥಾಪನೆಯಾಯಿತು

8. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪನೆಗೆ ಸಂಬಂಧಿಸಿದಂತೆ ತಪ್ಪಾದ ಹೇಳಿಕೆಗಳನ್ನು ಗುರುತಿಸಿ.

(a) ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಮೊದಲ ಅಧಿವೇಶನವು 27-12-1885 ರಂದು ಬಾಂಬೆಯಲ್ಲಿ ಜರುಗಿತು.

(b) ಡಬ್ಲ್ಯೂ.ಸಿ. ಬ್ಯಾನರ್ಜಿ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು.

(c) ಭಾರತದ ವಿವಿಧ ಭಾಗಗಳಿಂದ 78 ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದ್ದರು.

(d) ಕರ್ನಾಟಕದಿಂದ ಎಂಟು ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದ್ದರು.

(1) (a) ಮತ್ತು (b) ಮಾತ್ರ

(2) (c) ಮತ್ತು (d) ಮಾತ್ರ

(3) (b) ಮತ್ತು (c) ಮಾತ್ರ

(4) (b) ಮತ್ತು (d) ಮಾತ್ರ

9. ಸಿಂಧೂ ನಾಗರಿಕತೆಯ ನಗರ ಯೋಜನೆಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿರಿ.

ಹೇಳಿಕೆ-I : ಅವರ ನಗರ ಯೋಜನೆಯು ಅವರು ಅತ್ಯಂತ ಸುಸಂಸ್ಕೃತ ಮತ್ತು ಅಭಿವೃದ್ಧಿ ಹೊಂದಿದ ಜೀವನವನ್ನು ನಡೆಸುತ್ತಿದ್ದರೆಂಬುದನ್ನು ಸಾಬೀತುಪಡಿಸುತ್ತದೆ.

ಹೇಳಿಕೆ-II : ಸಿಂಧೂ ಜನರು ವೈಜ್ಞಾನಿಕ ಒಳಚರಂಡಿ ವ್ಯವಸ್ಥೆಯನ್ನೊಳಗೊಂಡ ಯೋಜನಾಬದ್ಧ ನಗರಗಳನ್ನು ನಿರ್ಮಿಸಿದವರಲ್ಲಿ ಮೊದಲಿಗರು.

ಮೇಲಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ ಕೆಳಗಿನವುಗಳಲ್ಲಿ ಯಾವುದು ಸರಿ?

(1) ಹೇಳಿಕೆ -I ಮತ್ತು ಹೇಳಿಕೆ -II ಎರಡೂ ಸರಿಯಾಗಿವೆ ಮತ್ತು ಹೇಳಿಕೆ-II, ಹೇಳಿಕೆ-I ಅನ್ನು ವಿವರಿಸುತ್ತದೆ.

(2) ಹೇಳಿಕೆ -I ಮತ್ತು ಹೇಳಿಕೆ -II ಎರಡೂ ಸರಿಯಾಗಿವೆ, ಆದರೆ ಹೇಳಿಕೆ-II ಹೇಳಿಕೆ-I ಅನ್ನು ವಿವರಿಸುವುದಿಲ್ಲ.

(3) ಹೇಳಿಕೆ -I ಸರಿ, ಆದರೆ ಹೇಳಿಕೆ -II ತಪ್ಪು.

(4) ಹೇಳಿಕೆ -I ತಪ್ಪು, ಆದರೆ ಹೇಳಿಕೆ -II ಸರಿ.

ಕಚ್ಚಾ ಕೆಲಸಕ್ಕೆ ಸ್ಥಳ

SHIKARAT.COM

7. Which of the following is NOT correct regarding pre-Independence social organizations in Karnataka?

(1) The Veerashaiva Mahasabha was founded in 1904

(2) The Vokkaligara Sangha was founded in 1906

(3) The Prajamitra Mandali was founded in 1917

(4) The Karnataka Vidyavardhaka Sangha was founded in 1915

8. Identify the incorrect statements regarding the establishment of the Indian National Congress:

(a) The first session of the Indian National Congress was held at Bombay on 27-12-1885

(b) W. C. Bonnerjee was elected as the President

(c) 78 delegates from different parts of India attended it.

(d) Eight delegates from Karnataka attended it

(1) Only (a) and (b)

(2) Only (c) and (d)

(3) Only (b) and (c)

(4) Only (b) and (d)

9. Consider the following statements with reference to town planning of Indus Civilization:

Statement I: Their town planning proves that they lived a highly civilized and developed life.

Statement II: Indus people were the first to build planned cities with scientific drainage system.

Which of the following is correct with respect to the above statements?

(1) Both Statement I and Statement II are correct and Statement II explains Statement I

(2) Both Statement I and Statement II are correct, but Statement II does not explain Statement I

(3) Statement I is correct, but Statement II is incorrect

(4) Statement I is incorrect, but Statement II is correct

SPACE FOR ROUGH WORK

SHIKARAT.COM

A1

10. ಇಸಾಂಪುರ್, ಶಿಲಾ ಉಪಕರಣಗಳ ತಯಾರಿಕೆಯ ಕೇಂದ್ರ ಎಲ್ಲಿದೆ?

(1) ತಮಿಳುನಾಡು

(2) ಉತ್ತರ ಪ್ರದೇಶ

(3) ಕೇರಳ

(4) ಕರ್ನಾಟಕ

11. ಪೂರ್ಣ ಸ್ವರಾಜ್ಯಕ್ಕೆ ಸಂಬಂಧಿಸಿದಂತೆ ತಪ್ಪಾದ ಹೇಳಿಕೆ/ಹೇಳಿಕೆಗಳನ್ನು ಗುರುತಿಸಿ.

(a) ಐತಿಹಾಸಿಕ ಲಾಹೋರ್ ಅಧಿವೇಶನ 1929ರಲ್ಲಿ ನಡೆಯಿತು.

(b) ಇದು 'ಪೂರ್ಣ ಸ್ವರಾಜ್' ಎಂದು ಘೋಷಿಸಿ ನಿರ್ಣಯವನ್ನು ಅಂಗೀಕರಿಸಿತು.

(c) ಮೋತಿಲಾಲ್ ನೆಹರೂ ಅವರನ್ನು ಈ ಅಧಿವೇಶನದ ಅಧ್ಯಕ್ಷರನ್ನಾಗಿ ಆರಿಸಲಾಯಿತು.

(d) ಈ ಅಧಿವೇಶನವು ನಾಗರಿಕ ಕಾನೂನುಭಂಗ ಚಳುವಳಿಯನ್ನು ಆರಂಭಿಸುವುದಾಗಿ ಪ್ರಕಟಿಸಿತು.

(1) (a) ಮತ್ತು (b)

(2) (d) ಮಾತ್ರ

(3) (b) ಮತ್ತು (d)

(4) (c) ಮಾತ್ರ

12. ಈ ಕೆಳಗಿನವುಗಳನ್ನು ಕಾಲಾನುಕ್ರಮದಲ್ಲಿ ಜೋಡಿಸಿ.

(a) ಶ್ರೀರಂಗಪಟ್ಟಣ ಒಪ್ಪಂದ

(b) ಮದ್ರಾಸ್ ಒಪ್ಪಂದ

(c) ಮಂಗಳೂರು ಒಪ್ಪಂದ

(d) ಬೆಸ್ಸೀನ್ ಒಪ್ಪಂದ

ಕೆಳಗಿನ ಸಂಕೇತಗಳನ್ನು ಬಳಸಿ ಸೂಕ್ತ ಉತ್ತರವನ್ನು ಆರಿಸಿ.

(1) (c), (d), (a), (b)

(2) (a), (b), (c), (d)

(3) (d), (a), (b), (c)

(4) (b), (c), (a), (d)

ಕಚ್ಚಾ ಕೆಲಸಕ್ಕೆ ಸ್ಥಳ

SHIKARAT.COM

10. Isampur, a centre of stone tool manufacturing is situated in _____

(1) Tamil Nadu

(2) Uttar Pradesh

(3) Kerala

(4) Karnataka

11. Identify the incorrect statement/statements regarding Poorna Swaraj:

(a) Historical Lahore Session was held in 1929.

(b) It passed a resolution declaring 'Poorna Swaraj'

(c) Motilal Nehru was selected as the President of this session.

(d) This session announced the launching of Civil Disobedience Movement.

(1) (a) and (b)

(2) Only (d)

(3) (b) and (d)

(4) Only (c)

12. Arrange the following in chronological order:

(a) Treaty of Srirangapatna

(b) Treaty of Madras

(c) Treaty of Mangalore

(d) Treaty of Bassein

Choose the correct answer using the codes given below:

(1) (c), (d), (a), (b)

(2) (a), (b), (c), (d)

(3) (d), (a), (b), (c)

(4) (b), (c), (a), (d)

SPACE FOR ROUGH WORK

SHIKARAT.COM

A1

13. ಬೌದ್ಧ ಧರ್ಮಕ್ಕೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಹೇಳಿಕೆ-I : ಕ್ರಿ.ಪೂ. 6ನೇ ಶತಮಾನದಿಂದ ಕ್ರಿ.ಶ.12ನೇ ಶತಮಾನದವರೆಗೆ ಉತ್ತರ ಭಾರತವು ಬೌದ್ಧಧರ್ಮದ ಪ್ರಮುಖ ಕೇಂದ್ರವಾಗಿತ್ತು.

ಹೇಳಿಕೆ-II : ಇದೇ ಅವಧಿಯಲ್ಲಿ ದಕ್ಷಿಣ ಭಾರತದಲ್ಲಿ ಬೌದ್ಧ ಧರ್ಮಕ್ಕೆ ರಾಜಾಶ್ರಯವಿತ್ತು.

ಮೇಲಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ ಕೆಳಗಿನವುಗಳಲ್ಲಿ ಯಾವ ಆಯ್ಕೆ ಸರಿ?

(1) ಹೇಳಿಕೆ -I ಮತ್ತು ಹೇಳಿಕೆ -II ಎರಡೂ ಸರಿಯಾಗಿವೆ.

(2) ಹೇಳಿಕೆ -I ಮತ್ತು ಹೇಳಿಕೆ -II ಎರಡೂ ತಪ್ಪಾಗಿವೆ.

(3) ಹೇಳಿಕೆ -I ಸರಿಯಾಗಿದೆ, ಆದರೆ ಹೇಳಿಕೆ -II ತಪ್ಪಾಗಿದೆ.

(4) ಹೇಳಿಕೆ -I ತಪ್ಪಾಗಿದೆ, ಆದರೆ ಹೇಳಿಕೆ -II ಸರಿಯಾಗಿದೆ.

14. ಬಹಮನಿ ಅರಸ ಫಿರೋಜ್ ಷಾ ನಿಗೆ ಸಂಬಂಧಿಸಿದಂತೆ ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ.

(a) ಫಿರೋಜ್ ಷಾ ಅಳಿಯ ರಾಮರಾಯನೊಂದಿಗೆ ಹೋರಾಡಿದನು.

(b) ಫಿರೋಜ್ ಷಾ ನಿಗೆ ರಾಜಮನೆತನದ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಆಸಕ್ತಿ ಇರಲಿಲ್ಲ.

(c) ಫಿರೋಜ್ ಷಾ 'ಫಿರೋಜಾಬಾದ್' ಎಂಬ ಹೊಸ ನಗರ ನಿರ್ಮಿಸಿದನು.

(d) ಫಿರೋಜ್ ಷಾ ತೈಮೂರನ ಆಸ್ಥಾನಕ್ಕೆ ರಾಜತಾಂತ್ರಿಕ ನಿಯೋಗವನ್ನು ಕಳುಹಿಸಿದ.

(1) (a), (b) ಮತ್ತು (c) ಸರಿಯಾಗಿವೆ

(2) (c) ಮತ್ತು (d) ಸರಿಯಾಗಿವೆ

(3) (b), (c) ಮತ್ತು (d) ಸರಿಯಾಗಿವೆ

(4) (a), (b) ಮತ್ತು (d) ಸರಿಯಾಗಿವೆ

15. ಕಪಲೂರು ಶಾಸನದ ಪ್ರಕಾರ, ಪಶ್ಚಿಮ ಕರಾವಳಿಯ ಬಾರಕೂರು ಬಂದರಿನಲ್ಲಿ ವಿಜಯನಗರದ ಯಾವ ಅರಸ ಕೋಟೆ ಕಟ್ಟಿಸಿದನು?

(1) 1ನೇ ಹರಿಹರ

(2) 2ನೇ ಹರಿಹರ

(3) 1ನೇ ಬುಕ್ಕ

(4) 2ನೇ ದೇವರಾಯ

ಕಚ್ಚಾ ಕೆಲಸಕ್ಕೆ ಸ್ಥಳ

SHIKARAT.COM

13. Consider the following statements with reference to Buddhist religion:

Statement I: North India was a major center of Buddhism from the 6th Century BCE through the 12th Century CE.

Statement II: During the same period Buddhism received royal patronage in South India

Which of the following options is correct regarding the above statements?

(1) Both Statement I and Statement II are correct

(2) Both Statement I and Statement II are incorrect

(3) Statement I is correct but Statement II is incorrect

(4) Statement I is incorrect but Statement II is correct

14. Consider the following statements regarding the Bahmani King Firoz Shah:

(a) Firoz Shah fought alongside of Aliya Rama Raya.

(b) Firoz Shah had no interest in the construction of royal buildings

(c) Firoz Shah built the city of 'Firozabad'

(d) Firoz Shah sent an embassy to the court of Timur

(1) (a), (b) and (c) are correct

(2) (c) and (d) are correct

(3) (b), (c) and (d) are correct

(4) (a), (b) and (d) are correct

15. According to the Kapaluru inscription, which Vijayanagara King built a fort at the Barkur port on the Western Coast?

(1) Harihara I

(2) Harihara II

(3) Bukka I

(4) Devaraya II

SPACE FOR ROUGH WORK

SHIKARAT
shikarat.com
FREE EDUCATION FOR COMPETITIVE EXAMS

SHIKARAT.COM

A1

16. ಸೂಫಿ ಪಂಥದ ತತ್ವಗಳಿಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಹೇಳಿಕೆ-I : ದೇವರು ಒಬ್ಬನೇ, ಅವನು ಸರ್ವಶಕ್ತ.

ಹೇಳಿಕೆ-II : ಆಧ್ಯಾತ್ಮಿಕತೆಗೆ ಅವರು ಗಮನ ಕೊಡಲಿಲ್ಲ.

ಮೇಲಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ ಕೆಳಗಿನವುಗಳಲ್ಲಿ ಯಾವುದು ಸರಿ?

(1) ಹೇಳಿಕೆ -I ಮತ್ತು ಹೇಳಿಕೆ -II ಎರಡೂ ಸರಿ ಮತ್ತು ಹೇಳಿಕೆ-II, ಹೇಳಿಕೆ-I ಅನ್ನು ವಿವರಿಸುತ್ತದೆ.

(2) ಹೇಳಿಕೆ -I ಮತ್ತು ಹೇಳಿಕೆ -II ಎರಡೂ ಸರಿ, ಆದರೆ ಹೇಳಿಕೆ-II, ಹೇಳಿಕೆ-I ಅನ್ನು ವಿವರಿಸುವುದಿಲ್ಲ.

(3) ಹೇಳಿಕೆ -I ತಪ್ಪು, ಆದರೆ ಹೇಳಿಕೆ -II ಸರಿ.

(4) ಹೇಳಿಕೆ -I ಸರಿ, ಆದರೆ ಹೇಳಿಕೆ -II ತಪ್ಪು.

17. ರಜಿಯಾ ಸುಲ್ತಾನಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ.

(a) ಇಲ್ತುತ್ಮಿಶ್‌ಗೆ ಗಂಡು ಮಕ್ಕಳು ಇರಲಿಲ್ಲ.

(b) ನಾಣ್ಯಗಳ ಮೇಲೆ ಇಲ್ತುತ್ಮಿಶ್ ರಜಿಯಾಳ ಹೆಸರು ಮುದ್ರಿಸಿದ.

(c) ರುಕ್ನುದ್ದೀನ್ ಅಸಮರ್ಥ ಆಡಳಿತಗಾರನಾಗಿದ್ದನು.

(d) ರಜಿಯಾಳಿಗೆ ಕುದುರೆ ಸವಾರಿ ಬರುತ್ತಿರಲಿಲ್ಲ.

(1) (a), (b) ಮತ್ತು (c) ಸರಿಯಾಗಿವೆ

(2) (b), (c) ಮತ್ತು (d) ಸರಿಯಾಗಿವೆ

(3) (a), (b) ಮತ್ತು (d) ಸರಿಯಾಗಿವೆ

(4) (b) ಮತ್ತು (c) ಸರಿಯಾಗಿವೆ

18. ಕೆಳಗಿನ ಯಾವ ಜೋಡಿ/ಗಳು ಸರಿಯಾಗಿ ಹೊಂದಾಣಿಕೆಯಾಗಿದೆ/ವೆ?

I. ದೇಶಮುಖರ ಬಂಡಾಯ - ಲೆಫ್ಟಿನೆಂಟ್ ಸದರ್ಲೆಂಡ್

II. ಕೊಪ್ಪಳ ದಂಗೆ - ಮೇಜರ್ ಜನರಲ್ ಪ್ರಿಟ್ಜ್ಲರ್

(1) I ಮಾತ್ರ

(2) II ಮಾತ್ರ

(3) I ಮತ್ತು II

(4) I ಮತ್ತು II ಎರಡೂ ಸರಿಯಾಗಿ ಹೊಂದಾಣಿಕೆಯಾಗಿಲ್ಲ

ಕಚ್ಚಾ ಕೆಲಸಕ್ಕೆ ಸ್ಥಳ

SHIKARAT.COM

16. Consider the following statements regarding the principles of Sufism:

Statement I: God is One, He is Omnipotent.

Statement II: They did not pay attention to spirituality.

Which of the following is correct with respect to the above statements?

(1) Both Statement I and Statement II are correct and Statement II explains Statement I

(2) Both Statement I and Statement II are correct, but Statement II does not explain Statement I

(3) Statement I is incorrect, but Statement II is correct

(4) Statement I is correct, but Statement II is incorrect

17. Consider the following statements regarding Razia Sultana:

(a) Iltutmish had no sons

(b) Iltutmish imprinted Razia's name on the coins.

(c) Ruknuddin was an incompetent ruler.

(d) Razia did not know how to ride a horse.

(1) (a), (b) and (c) are correct

(2) (b), (c) and (d) are correct

(3) (a), (b) and (d) are correct

(4) (b) and (c) are correct

18. Which of the following pair/s is/are correctly matched?

I. Deshmukh's Rebellion – Lieutenant Sutherland

II. Uprising of Koppal – Major General Pritzler

(1) I only

(2) II only

(3) Both I and II

(4) Neither I nor II are correctly matched

SPACE FOR ROUGH WORK

SHIKARAT.COM

SHIKARAT.COM

A1

19. ಈ ಕೆಳಗಿನವರಲ್ಲಿ ಉತ್ತಮ ಸಮನ್ವಯಕ್ಕಾಗಿ ಎಲ್ಲಾ ಬಡತನ ನಿರ್ಮೂಲನಾ ಕಾರ್ಯಕ್ರಮಗಳನ್ನು IRDP ಕಾರ್ಯಕ್ರಮದೊಂದಿಗೆ ಸಂಯೋಜಿಸಬೇಕೆಂದು ಶಿಫಾರಸ್ಸು ನೀಡಿದ ಸಮಿತಿಯ ಅಧ್ಯಕ್ಷರನ್ನು ಹೆಸರಿಸಿ.

(1) ಎಸ್.ಆರ್. ಹಶೀಮ್
(2) ಪಿ.ಆರ್. ಬ್ರಹ್ಮಾನಂದ
(3) ಮಧು ದಂಡವತೆ
(4) ಸಿ. ರಾಜಾ ಚೆಲ್ಲಯ್ಯ

20. MIDH (ಮಿಷನ್ ಫಾರ್ ಇಂಟಿಗ್ರೇಟೆಡ್ ಡೆವಲಪ್‌ಮೆಂಟ್ ಆಫ್ ಹಾರ್ಟಿಕಲ್ಚರ್)ನಲ್ಲಿ ಇ-ಆಡಳಿತ ಜಾರಿಗೊಳಿಸಲು ಜಾರಿಗೆ ತಂದ ಯೋಜನೆ.

(1) ಹಾರ್ನೆಟ್ (HORNET)
(2) ಹಾರ್ಟ್‌ನೆಟ್ (HORTNET)
(3) ಪ್ಲಾಂಟ್‌ನೆಟ್ (PLANTNET)
(4) ಅಗ್ರಿನೆಟ್ (AGRINET)

21. ಭೂ ಸುಧಾರಣಾ ಕಾಯ್ದೆ 1961ರ ಕಲಂ 109(1)ರ ಅಡಿಯಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟ್‌ರವರು ಶೈಕ್ಷಣಿಕ ಉದ್ದೇಶಗಳಿಗಾಗಿ ಖಾಸಗಿ ಸಂಸ್ಥೆಗಳಿಗೆ ಮಂಜೂರು ಮಾಡಬಹುದಾದ ಕೃಷಿ ಭೂಮಿಯ ಮಿತಿ ಎಷ್ಟು ಯೂನಿಟ್‌ಗಳು?

(1) 10 ಯೂನಿಟ್‌ಗಳಿಗೆ ಮೀರದಂತೆ
(2) 4 ಯೂನಿಟ್‌ಗಳಿಗೆ ಮೀರದಂತೆ
(3) 5 ಯೂನಿಟ್‌ಗಳಿಗೆ ಮೀರದಂತೆ
(4) 2 ಯೂನಿಟ್‌ಗಳಿಗೆ ಮೀರದಂತೆ

22. 'ಶುಚಿ ನನ್ನ ಮೈತ್ರಿ' ಯೋಜನೆಗೆ ಸಂಬಂಧಿಸಿದಂತೆ ಯಾವುದು/ವು ಸರಿಯಾಗಿದೆ/ವೆ?

(a) ಇದು ಸರ್ಕಾರದ ಶುಚಿ ಕಾರ್ಯಕ್ರಮದ ಸುಧಾರಿತ ಆವೃತ್ತಿಯಾಗಿದೆ.

(b) ಇದು ಮರುಬಳಕೆ ಮಾಡಬಹುದಾದ ಮೆನ್‌ಸ್ಟ್ರುಯಲ್ ಕಪ್‌ಗಳ ಬಳಕೆಯನ್ನು ಪ್ರೋತ್ಸಾಹಿಸುತ್ತದೆ ಮತ್ತು ಹದಿಹರೆಯದ ಹುಡುಗಿಯರಿಗೆ ವಿತರಿಸುತ್ತದೆ.

(c) ಪ್ರಾರಂಭಿಕವಾಗಿ ದಕ್ಷಿಣಕನ್ನಡ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಅನುಷ್ಠಾನ ಮಾಡಲಾಯಿತು.

(d) ಮೆನ್‌ಸ್ಟ್ರುಯಲ್ ಕಪ್‌ಗಳನ್ನು 8 ರಿಂದ 10 ತಿಂಗಳುಗಳವರೆಗೆ ಮರುಬಳಕೆ ಮಾಡಬಹುದು.

ಈ ಕೆಳಗಿನ ಸಂಕೇತಗಳಿಂದ ಸರಿಯಾದ ಉತ್ತರವನ್ನು ಆರಿಸಿ.

(1) (a) ಮತ್ತು (b)
(2) (a) ಮತ್ತು (c)
(3) (a), (b) ಮತ್ತು (c)
(4) (a), (b), (c) ಮತ್ತು (d)

ಕಚ್ಚಾ ಕೆಲಸಕ್ಕೆ ಸ್ಥಳ

SHIKARAT.COM

19. Name the head of the committee which recommended for integration of all poverty alleviation programmes with IRDP for better linkage.

(1) S. R. Hashim

(2) P. R. Brahmananda

(3) Madhu Dandavate

(4) C. Raja Chelliah

20. A project to achieve e-governance in MIDH (Mission for Integrated Development of Horticulture) is

(1) HORNET (2) HORTNET

(3) PLANTNET (4) AGRINET

21. What is the limit of units of agricultural land that can be sanctioned by district magistrate for educational purposes to private organizations under Section 109(1) of the Land Reforms Act of 1961?

(1) Not exceeding 10 units

(2) Not exceeding 4 units

(3) Not exceeding 5 units

(4) Not exceeding 2 units

22. Which of the following is/are correct regarding 'Shuchi Nanna Mythri' scheme?

(a) It is a modified version of the government's Shuchi programme

(b) It encourages the use of reusable menstrual cups and distributes to adolescent girls.

(c) Initially this scheme was implemented in Dakshina Kannada and Chamarajanagar district.

(d) Menstrual cups can be reused up to 8-10 months.

Choose the correct answer using the codes given below.

(1) (a) and (b) (2) (a) and (c)

(3) (a), (b) and (c) (4) (a), (b), (c) and (d)

SPACE FOR ROUGH WORK

SHIKARAT.COM

23. ಕೆಳಗಿನ ಜೋಡಿಗಳನ್ನು ಪರಿಗಣಿಸಿ.

(a) ರೂಪಾಯಿಯ ಮೊದಲ ಅಪಮೌಲ್ಯೀಕರಣ-1948

(b) ರೂಪಾಯಿಯ ಎರಡನೇ ಅಪಮೌಲ್ಯೀಕರಣ-1966

(c) ರೂಪಾಯಿಯ ಮೂರನೇ ಅಪಮೌಲ್ಯೀಕರಣ-1995

ಈ ಮೇಲಿನವುಗಳಲ್ಲಿ ಸರಿಯಾಗಿ ಹೊಂದಾಣಿಕೆಯಾಗಿರುವ ಜೋಡಿಗಳನ್ನು ಗುರುತಿಸಿ.

(1) (a) ಮಾತ್ರ
(2) (a) ಮತ್ತು (b) ಮಾತ್ರ
(3) (c) ಮಾತ್ರ
(4) (a), (b) ಮತ್ತು (c)

24. 'ಮ್ಯಾಗ್ನಾನಿಮಿಟಿ ಫಾರ್ ಈಕ್ವಿಟಿ' ಕೃತಿಯು ಏನನ್ನು ಒಳಗೊಂಡಿದೆ?

(a) ಕರ್ನಾಟಕದ ವಿಶಿಷ್ಟ CSR ಪದ್ಧತಿಗಳ ಪಟ್ಟಿ

(b) ಕರ್ನಾಟಕದ ಕಾರ್ಪೊರೇಟ್ ವಿಶಿಷ್ಟ ಹೂಡಿಕೆದಾರರ ಪಟ್ಟಿ

(c) ಕರ್ನಾಟಕದ ವಿಶಿಷ್ಟ ಯೂನಿಕಾರ್ನ್‌ಗಳ ಪಟ್ಟಿ

(d) ಕರ್ನಾಟಕದ ವಿಶಿಷ್ಟ ಹೂಡಿಕೆದಾರರ ಪಟ್ಟಿ

(1) (a) ಮಾತ್ರ
(2) (b) ಮಾತ್ರ
(3) (c) ಮಾತ್ರ
(4) (c) ಮತ್ತು (d) ಮಾತ್ರ

25. ಭೂ ಸುಧಾರಣೆಗಳ ಉದ್ದೇಶಗಳು

(a) ಭೂಮಿಯ ನ್ಯಾಯಸಮ್ಮತ ಹಂಚಿಕೆ

(b) ಬಡತನ ನಿರ್ಮೂಲನೆ

(c) ಗೇಣಿ ನಿಯಂತ್ರಣ

(d) ಸಂಪತ್ತಿನ ಕೇಂದ್ರೀಕರಣ

(1) (c) ಮತ್ತು (d)
(2) (b), (c) ಮತ್ತು (d)
(3) (a), (b) ಮತ್ತು (c)
(4) (a), (b) ಮತ್ತು (d)

SHIKARAT.COM

ಕಚ್ಚಾ ಕೆಲಸಕ್ಕೆ ಸ್ಥಳ

SHIKARAT.COM

23. Consider the following pairs.

(a) First devaluation of Rupee – 1948

(b) Second devaluation of Rupee – 1966

(c) Third devaluation of Rupee – 1995.

Identify the correctly matched pairs above.

(1) (a) only
(2) (a) and (b) only
(3) (c) only
(4) (a), (b) and (c)

24. The book titled "Magnanimity for Equity" consists of

(a) A list of unique CSR practices in Karnataka

(b) A list of unique corporate investors in Karnataka

(c) A list of unique unicorns in Karnataka

(d) A list of unique investors in Karnataka

(1) (a) only

(2) (b) only

(3) (c) only

(4) (c) and (d) only

25. Objectives of Land Reforms are

(a) Equitable land distribution

(b) Poverty alleviation

(c) Tenancy regulation

(d) Wealth concentration

(1) (c) and (d)

(2) (b), (c) and (d)

(3) (a), (b) and (c)

(4) (a), (b) and (d)

SPACE FOR ROUGH WORK

SHIKARAT.COM

A1

26. ಪಟ್ಟಿ-I ನ್ನು ಪಟ್ಟಿ-II ರೊಂದಿಗೆ ಹೊಂದಿಸಿ.

ಪಟ್ಟಿ-I (ಏಜೆನ್ಸಿ)	ಪಟ್ಟಿ-II (ಯೋಜನೆ)
(a) AMRUT (ಅಟಲ್ ಮಿಷನ್ ಫಾರ್ ರೆಜುವೆನೇಶನ್ ಆ್ಯಂಡ್ ಅರ್ಬನ್ ಟ್ರಾನ್ಸ್‌ಫಾರ್ಮೇಷನ್)	(i) ಗ್ರಾಮೀಣಾಭಿವೃದ್ಧಿಗೆ ಹಣಕಾಸಿನ ನೆರವು ನೀಡುವುದು
(b) ದೀನ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ	(ii) ಬಡ ಜಿಲ್ಲೆಗಳಲ್ಲಿ ಉದ್ಯೋಗ ಖಾತರಿ ಒದಗಿಸುವುದು
(c) ಜಯಪ್ರಕಾಶ್ ನಾರಾಯಣ್ ರೋಜ್‌ಗಾರ್ ಗ್ಯಾರಂಟಿ ಯೋಜನೆ	(iii) ಯುವಜನತೆಯಲ್ಲಿ ಕೌಶಲ್ಯ ಉನ್ನತೀಕರಣ
(d) ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಏಜೆನ್ಸಿ	(iv) ನಗರಗಳ ಉನ್ನತೀಕರಣ

ಸಂಕೇತಗಳು:

(1) a – iv, b – iii, c – ii, d – i

(2) a – iii, b – ii, c – i, d – iv

(3) a – ii, b – iv, c – iii, d – i

(4) a – i, b – ii, c – iii, d – iv

27. ಭಾರತದ ಕೃಷಿಗೆ ಸಂಬಂಧಿಸಿದಂತೆ, ಈ ಕೆಳಗಿನ ಪ್ರತಿಪಾದನೆ (A) ಮತ್ತು ಕಾರಣ (R) ಗಳನ್ನು ಪರಿಗಣಿಸಿ.

ಪ್ರತಿಪಾದನೆ (A) : ಜಿ.ಡಿ.ಪಿ.ಯಲ್ಲಿ ಭಾರತದ ಕೃಷಿ ಪಾಲು ಕಾಲಾಂತರದಲ್ಲಿ ಹೆಚ್ಚಾಗುತ್ತಾ ಬಂದಿದೆ.

ಕಾರಣ (R) : ಕೈಗಾರಿಕೆ ಮತ್ತು ಸೇವಾ ವಲಯಗಳು ಕೃಷಿ ವಲಯಕ್ಕಿಂತ ವೇಗವಾಗಿ ಬೆಳೆದಿವೆ.

ಮೇಲಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ, ಕೆಳಗಿನವುಗಳಲ್ಲಿ ಯಾವುದು ಸರಿ?

(1) ಪ್ರತಿಪಾದನೆ (A) ಮತ್ತು ಕಾರಣ (R) ಎರಡೂ ಸರಿಯಾಗಿವೆ ಮತ್ತು ಕಾರಣ (R) ಪ್ರತಿಪಾದನೆ (A)ಯ ಸರಿಯಾದ ವಿವರಣೆಯಾಗಿದೆ.

(2) ಪ್ರತಿಪಾದನೆ (A) ಮತ್ತು ಕಾರಣ (R) ಎರಡೂ ಸರಿಯಾಗಿವೆ, ಆದರೆ ಕಾರಣ (R) ಪ್ರತಿಪಾದನೆ (A) ಯ ಸರಿಯಾದ ವಿವರಣೆಯಲ್ಲ.

(3) ಪ್ರತಿಪಾದನೆ (A) ಸರಿಯಾಗಿದೆ, ಆದರೆ ಕಾರಣ (R) ಸರಿಯಾಗಿಲ್ಲ.

(4) ಪ್ರತಿಪಾದನೆ (A) ತಪ್ಪಾಗಿದೆ, ಆದರೆ ಕಾರಣ (R) ಸರಿಯಾಗಿದೆ.

ಕಚ್ಚಾ ಕೆಲಸಕ್ಕೆ ಸ್ಥಳ

SHIKARAT.COM

26. Match List – I with List – II:

List – I (Agency)	List – II (Scheme)
(a) AMRUT (Atal Mission for Rejuvenation and Urban Transformation)	(i) To provide financial assistance to rural development
(b) Deen Dayal Upadhyaya Grameena Kaushalya Yojana	(ii) To provide employment guarantee in poor districts
(c) Jayaprakash Narayan Rozgar Guarantee Yojana	(iii) Skill upgradation of youth
(d) District Rural Development Agency	(iv) Urban upgradation

Codes:

(1) a – iv, b – iii, c – ii, d – i

(2) a – iii, b – ii, c – i, d – iv

(3) a – ii, b – iv, c – iii, d – i

(4) a – i, b – ii, c – iii, d – iv

A1

27. Consider the following Assertion (A) and Reason (R) statements with reference to Indian agriculture:

Assertion (A): Indian agriculture has experienced an increase in its share of GDP over a period of time.

Reason (R): The industrial and service sectors have grown faster than agriculture.

Which of the following is correct with respect to the above statements?

(1) Both Assertion (A) and Reason (R) are true and Reason (R) is the correct explanation of Assertion (A)

(2) Both Assertion (A) and Reason (R) are true but Reason (R) is not the correct explanation of Assertion (A)

(3) Assertion (A) is true, but Reason (R) is false

(4) Assertion (A) is false, but Reason (R) is true

SPACE FOR ROUGH WORK

SHIKARAT.COM

A1

28. ಈ ಕೆಳಗಿನ ಯಾವ ಜೋಡಿಗಳು ಸರಿಯಾಗಿ ಹೊಂದಾಣಿಕೆಯಾಗಿವೆ?

(a) ಪಿ.ಎಂ.-ಕೆ.ಎಸ್.ವೈ - ಉತ್ತಮ ನೀರಾವರಿ ವ್ಯವಸ್ಥೆಯ ಮೇಲೆ ಗಮನ ಕೇಂದ್ರೀಕರಿಸುತ್ತದೆ

(b) ಪಿ.ಎಂ.-ಎ.ವೈ - ಸಾವಯವ ಕೃಷಿಯ ಮೇಲೆ ಗಮನ ಕೇಂದ್ರೀಕರಿಸುತ್ತದೆ

(c) ಪಿ.ಎಂ.-ಎಂ.ಎಸ್.ವೈ - ನೀಲಿ ಕ್ರಾಂತಿಯ ಮೇಲೆ ಗಮನ ಕೇಂದ್ರೀಕರಿಸುತ್ತದೆ

(d) ಪಿ.ಎಂ.-ಕೆ.ಎಂ.ವೈ - ಕೃಷಿಯ ಆಧುನಿಕತೆಯ ಮೇಲೆ ಗಮನ ಕೇಂದ್ರೀಕರಿಸುತ್ತದೆ

(1) (a) ಮತ್ತು (b)

(2) (a) ಮತ್ತು (c)

(3) (a), (c) ಮತ್ತು (d)

(4) (a), (b) ಮತ್ತು (c)

29. 2025-26ರ ಕೇಂದ್ರದ ಮುಂಗಡ ಪತ್ರದಲ್ಲಿ ಕಿಸಾನ್ ಕ್ರೆಡಿಟ್ ಕಾರ್ಡ್‌ನ ಸಾಲದ ಮಿತಿಯನ್ನು ಎಷ್ಟಕ್ಕೆ ಹೆಚ್ಚಿಸಲಾಗಿದೆ?

(1) ₹3 ಲಕ್ಷದಿಂದ ₹5 ಲಕ್ಷಕ್ಕೆ

(2) ₹2.5 ಲಕ್ಷದಿಂದ ₹4 ಲಕ್ಷಕ್ಕೆ

(3) ₹3 ಲಕ್ಷದಿಂದ ₹6 ಲಕ್ಷಕ್ಕೆ

(4) ₹3 ಲಕ್ಷದಿಂದ ₹4.5 ಲಕ್ಷಕ್ಕೆ

30. ಪಿ.ಎಂ.-ಸೂರ್ಯ ಘರ್ ಯೋಜನೆಗೆ ಸಂಬಂಧಿಸಿದಂತೆ ತಪ್ಪಾದ ಹೇಳಿಕೆಯನ್ನು ಗುರುತಿಸಿ.

(1) ಈ ಯೋಜನೆಯನ್ನು 2024ರಲ್ಲಿ ಪ್ರಾರಂಭಿಸಲಾಯಿತು.

(2) ಸಹಾಯಧನವನ್ನು ಕುಟುಂಬಗಳು ಮತ್ತು ಸಂಸ್ಥೆಗಳಿಗೆ ನೀಡಲಾಗುತ್ತದೆ.

(3) ಭಾರತದ ಕುಟುಂಬಗಳಿಗೆ ಸೌರ ವಿದ್ಯುತ್ ನೀಡುವ ಗುರಿ ಹೊಂದಿದೆ.

(4) ಸೋಲಾರ್ ಪ್ಯಾನಲ್‌ನ ಸಬ್ಸಿಡಿಯು 40% ರವರೆಗೆ ಇದ್ದು, ಗರಿಷ್ಠ ರೂ. 78,000/- ಮಿತಿಗೊಳಪಟ್ಟಿದೆ.

31. ಕರ್ನಾಟಕದ ಒಟ್ಟು ಆಂತರಿಕ ಉತ್ಪನ್ನ (GSDP) ಅಂದಾಜು ಮಾಡುವ ಜವಾಬ್ದಾರಿ ಹೊಂದಿರುವ ನೋಡಲ್ ಏಜೆನ್ಸಿ ಯಾವುದು?

(1) ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ

(2) ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

(3) ಕೇಂದ್ರೀಯ ಸಾಂಖ್ಯಿಕ ಸಂಸ್ಥೆ, ಭಾರತ ಸರ್ಕಾರ

(4) ಕರ್ನಾಟಕ ರಾಜ್ಯ ಹಣಕಾಸು ಆಯೋಗ

ಕಚ್ಚಾ ಕೆಲಸಕ್ಕೆ ಸ್ಥಳ

SHIKARAT.COM

28. Which one of the following are correctly matched pairs?

(a) PM-KSY – Focuses on better irrigation system

(b) PM-VY – Focuses on organic farming

(c) PM-MSY – Focuses on blue revolution

(d) PM-KMY – Focuses on modernisation of agriculture

(1) (a) and (b)

(2) (a) and (c)

(3) (a), (c) and (d)

(4) (a), (b) and (c)

29. 2025-26 Central Union Budget Kisan Credit Card loan limit increased from

(1) ₹3 lakh to ₹5 lakh

(2) ₹2.5 lakh to ₹4 lakh

(3) ₹3 lakh to ₹6 lakh

(4) ₹3 lakh to ₹4.5 lakh

30. Identify the incorrect statement regarding the PM-Surya Ghar Yojana.

(1) The scheme was launched in 2024

(2) The subsidy will be provided for households and institutions

(3) It aims to provide solar energy to households in India

(4) The subsidy will cover up to 40% of solar panels and maximum capped at ₹78,000/-

31. The nodal agency responsible for estimating the Gross State Domestic Product (GSDP) in Karnataka is

(1) Planning Department, GoK

(2) Directorate of Economics and Statistics, GoK

(3) Central Statistical Office, GoI

(4) Karnataka State Finance Commission

SPACE FOR ROUGH WORK

SHIKARAT.COM

A1

32. ಇವುಗಳಲ್ಲಿ ಯಾವುದು 2022-27ರ ಕರ್ನಾಟಕ ಸ್ಟಾರ್ಟ್‌ಅಪ್ ನೀತಿಯ ಲಕ್ಷಣವಲ್ಲ ?

(1) ವೆಸ್ಕಲೇಟ್ (WEscalate)

(2) ತಳಮಟ್ಟದ ನಾವೀನ್ಯತೆ

(3) ರಾಜೀವ್‌ಗಾಂಧಿ ಉದ್ಯಮಶೀಲತೆ ಕಾರ್ಯಕ್ರಮ

(4) ಕಾರ್ಮಿಕ ಕಲ್ಯಾಣ ಪ್ರೋತ್ಸಾಹಕಗಳು

33. ಭಾರತದ ಕೃಷಿಗೆ ಸಂಬಂಧಿಸಿದಂತೆ, ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಹೇಳಿಕೆ-I : 2024-25ರಲ್ಲಿ ಶೇಕಡಾ 54.6 ರಷ್ಟು ಭಾರತದ ಶ್ರಮಶಕ್ತಿ ಕೃಷಿ ಮತ್ತು ಸಂಬಂಧಿತ ವಲಯದ ಉದ್ಯೋಗದಲ್ಲಿ ನಿರತವಾಗಿದೆ.

ಹೇಳಿಕೆ-II : 2022-23ರಲ್ಲಿ ಭಾರತದ ಪ್ರಸ್ತುತ ದರದಲ್ಲಿ ಜಿ.ವಿ.ಎ. ಕೃಷಿ ವಲಯಕ್ಕೆ ಶೇ. 18.4 ರಷ್ಟು ಕೊಡುಗೆ ನೀಡಿದೆ.

ಮೇಲಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ ಕೆಳಗಿನವುಗಳಲ್ಲಿ ಯಾವುದು ಸರಿ?

(1) ಹೇಳಿಕೆ -I ಮತ್ತು ಹೇಳಿಕೆ -II ಎರಡೂ ಸರಿ ಮತ್ತು ಹೇಳಿಕೆ-II ಹೇಳಿಕೆ-I ನ್ನು ವಿವರಿಸುತ್ತದೆ.

(2) ಹೇಳಿಕೆ -I ಮತ್ತು ಹೇಳಿಕೆ -II ಎರಡೂ ಸರಿ, ಆದರೆ ಹೇಳಿಕೆ-II ಹೇಳಿಕೆ-I ನ್ನು ವಿವರಿಸುವುದಿಲ್ಲ.

(3) ಹೇಳಿಕೆ -I ಸರಿ, ಆದರೆ ಹೇಳಿಕೆ -II ತಪ್ಪು.

(4) ಹೇಳಿಕೆ -I ತಪ್ಪು, ಆದರೆ ಹೇಳಿಕೆ -II ಸರಿ.

34. ಕರ್ನಾಟಕದಲ್ಲಿ ಕಂಡು ಬರುವ ಮ್ಯಾಂಗನೀಸ್ ಅದಿರು ಈ ಕಾಲಕ್ಕೆ ಸೇರಿದೆ.

(1) ಆದಿಜೀವ (ಆರ್ಕಿಯನ್) ಯುಗ

(2) ಹಿಮ (ಪ್ಲೈಸ್ಟೋಸೀನ್ ಯುಗ)

(3) ತೃತೀಯ ಯುಗ

(4) ಸುಣ್ಣಕಲ್ಲು (ಕ್ರಿಟೇಷಿಯಸ್) ಯುಗ

35. ಈ ಕೆಳಕಂಡ ಯಾವ ಜನಗಣತಿಯಲ್ಲಿ ಕರ್ನಾಟಕದಲ್ಲಿ ಅತಿ ಹೆಚ್ಚು ಜನಸಂಖ್ಯೆ ಬೆಳವಣಿಗೆಯಾಗಿರುವ ದಾಖಲಾಗಿದೆ?

(1) 1961

(2) 1971

(3) 1981

(4) 1991

ಕಚ್ಚಾ ಕೆಲಸಕ್ಕೆ ಸ್ಥಳ

SHIKARAT.COM

32. Which one of the following is not a feature of Karnataka Start-up Policy 2022-27?

(1) WEscalate

(2) Grassroot innovation

(3) Rajiv Gandhi Entrepreneurship Programme

(4) Labour welfare incentives

33. Consider the following statements with reference to Indian agriculture:

Statement I: In 2024-25, 54.6% of the total workforce of India is engaged in agriculture and allied sector.

Statement II: Agricultural sector accounted for 18.4% of India's GVA at current prices during 2022-23.

Which of the following is correct with respect to the above statements?

(1) Both Statement I and Statements II are correct and Statement II explains Statement I

(2) Both Statement I and Statement II are correct, but Statement II does not explain Statement I

(3) Statement I is correct, but Statement II is incorrect

(4) Statement I is incorrect, but Statement II is correct

34. Manganese ore, found in Karnataka, belongs to

(1) Archaean period

(2) Pleistocene period

(3) Tertiary period

(4) Cretaceous period

35. In which of the following Census, the highest population growth has been recorded in Karnataka?

(1) 1961

(2) 1971

(3) 1981

(4) 1991

SPACE FOR ROUGH WORK

SHIKARAT.COM

A1

36. ಈ ಕೆಳಗಿನ ಜೋಡಿಗಳನ್ನು ಪರಿಗಣಿಸಿ.

ನದಿಗಳು		ಅಣೆಕಟ್ಟುಗಳು
(a) ಶರಾವತಿ	-	ಹಿರೇಭಾಸ್ಕರ
(b) ಕಾವೇರಿ	-	ಮಾಧವಮಂತ್ರಿ
(c) ಶಿಂಷಾ	-	ಕೊಡಸಳ್ಳಿ

ಇವುಗಳಲ್ಲಿ ಯಾವ ಜೋಡಿ/ಗಳು ಸರಿಯಾಗಿ ಹೊಂದಾಣಿಕೆಯಾಗಿದೆ/ವೆ?

(1) (a) ಮತ್ತು (b) ಮಾತ್ರ
(2) (b) ಮಾತ್ರ
(3) (b) ಮತ್ತು (c) ಮಾತ್ರ
(4) (a), (b) ಮತ್ತು (c)

37. ಗೋವಾದಿಂದ ಪ್ರಾರಂಭಿಸಿ ಕರ್ನಾಟಕವನ್ನು ಸುತ್ತುವರೆದಿರುವ ಈ ಕೆಳಗಿನ ರಾಜ್ಯಗಳನ್ನು ಪ್ರದಕ್ಷಿಣಾಕಾರವಾಗಿ ಜೋಡಿಸಿ.

(1) ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ಕೇರಳ
(2) ಮಹಾರಾಷ್ಟ್ರ, ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಕೇರಳ
(3) ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ, ಕೇರಳ, ತಮಿಳುನಾಡು
(4) ಆಂಧ್ರಪ್ರದೇಶ, ಮಹಾರಾಷ್ಟ್ರ, ತೆಲಂಗಾಣ, ತಮಿಳುನಾಡು, ಕೇರಳ

38. ಈ ಕೆಳಗಿನವುಗಳಲ್ಲಿ ಸರಿಯಾದ ಜೋಡಣೆಯನ್ನು ಗುರುತಿಸಿ.

(a) ಮುಂಬೈ - ಕಾಟನೋಪೊಲಿಸ್
(b) ಹೈದ್ರಾಬಾದ್ - ಸಿಲಿಕಾನ್ ಹಬ್
(c) ಗೋರಖ್‌ಪುರ - ಭಾರತದ ಜಾವಾ
(d) ಮೈಸೂರು - ಅರಮನೆಗಳ ನಗರ

(1) (a), (b), (c) ಮತ್ತು (d)
(2) (a) ಮತ್ತು (c)
(3) (a), (b) ಮತ್ತು (d)
(4) (c), (b) ಮತ್ತು (d)

ಕಚ್ಚಾ ಕೆಲಸಕ್ಕೆ ಸ್ಥಳ

B

SHIKARAT.COM

36. Consider the following pairs:

	Rivers		Dams
(a)	Sharavathi	–	Hirebhaskara
(b)	Kaveri	–	Madhavmantri
(c)	Shimsha	–	Kodasalli

Which of the above pair/s is/are correctly matched?

(1) (a) and (b) only

(2) (b) only

(3) (b) and (c) only

(4) (a), (b) and (c)

37. Arrange the following states which are surrounding the Karnataka state in clockwise starting from Goa:

(1) Maharashtra, Andhra Pradesh, Telangana, Tamil Nadu, Kerala

(2) Maharashtra, Telangana, Andhra Pradesh, Tamil Nadu, Kerala

(3) Maharashtra, Andhra Pradesh, Telangana, Kerala, Tamil Nadu

(4) Andhra Pradesh, Maharashtra, Telangana, Tamil Nadu, Kerala

38. Identify the correctly matched pairs:

(a)	Mumbai	–	Catanopolis
(b)	Hyderabad	–	Silicon Hub
(c)	Gorakhpur	–	Java of India
(d)	Mysore	–	City of Palaces

(1) (a), (b), (c) and (d)

(2) (a) and (c)

(3) (a), (b) and (d)

(4) (c), (b) and (d)

SPACE FOR ROUGH WORK

SHIKARAT.COM

A1

39. 'ಸೈಜಿಜಿ' ಎಂದರೆ

(1) ಸೂರ್ಯ, ಚಂದ್ರ ಮತ್ತು ಭೂಮಿ ಒಂದೇ ಸರಳರೇಖೆಯಲ್ಲಿರುವುದು.

(2) ಸೂರ್ಯ ಮತ್ತು ಚಂದ್ರ ಭೂಮಿಗೆ ಲಂಬ ಸ್ಥಾನದಲ್ಲಿರುವುದು.

(3) ಸೂರ್ಯ, ಚಂದ್ರ ಮತ್ತು ಭೂಮಿಗಳು ಗಾತ್ರಕ್ಕೆ ಅನುಗುಣವಾಗಿ ಹೊಂದಿಕೆಯಾಗಿರುವುದು.

(4) ಆಕಾಶಕಾಯದ ಗಾತ್ರ ಮತ್ತು ಅದರ ಗುರುತ್ವಾಕರ್ಷಣ ಬಲ.

40. ಹೇಳಿಕೆ-I : ಪವನ ಶಕ್ತಿಯು ಅತ್ಯಂತ ಅಗ್ಗವಾಗಿದೆ, ಮಾಲಿನ್ಯರಹಿತವಾಗಿದೆ, ಪರಿಸರ ಸ್ನೇಹಿಯಾಗಿದೆ ಮತ್ತು ಇದನ್ನು ಸಾಂಪ್ರದಾಯಿಕ ಮೂಲಗಳಿಂದ ಹೊರತಾಗಿ ಅಭಿವೃದ್ಧಿಪಡಿಸಬಹುದಾಗಿದೆ.

ಹೇಳಿಕೆ-II : ಪವನ ಶಕ್ತಿಯ ಉತ್ಪಾದನೆಯಲ್ಲಿ ಭಾರತವು ಚೀನಾ, ಯು.ಎಸ್.ಎ. ಮತ್ತು ಜರ್ಮನಿಯ ನಂತರ 4ನೇ ಸ್ಥಾನದಲ್ಲಿದೆ.

ಈ ಮೇಲಿನ ಹೇಳಿಕೆಗಳನ್ನು ಪರಿಗಣಿಸಿ ಮತ್ತು ಕೆಳಗೆ ಕೊಟ್ಟಿರುವ ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

(1) ಹೇಳಿಕೆ -I ಸರಿ, ಆದರೆ ಹೇಳಿಕೆ -II ತಪ್ಪು.

(2) ಹೇಳಿಕೆ -I ತಪ್ಪು, ಆದರೆ ಹೇಳಿಕೆ -II ಸರಿ.

(3) ಹೇಳಿಕೆ -I ಮತ್ತು ಹೇಳಿಕೆ -II ಎರಡೂ ತಪ್ಪು.

(4) ಹೇಳಿಕೆ -I ಮತ್ತು ಹೇಳಿಕೆ -II ಎರಡೂ ಸರಿ.

41. ಬನಿಹಾಲ್ ಕಣಿವೆ ಮಾರ್ಗವು ಈ ಕೆಳಗಿನ ಯಾವ ಪ್ರದೇಶಗಳನ್ನು ಜೋಡಿಸುತ್ತದೆ?

(1) ಜಮ್ಮು ಮತ್ತು ಶ್ರೀನಗರಗಳನ್ನು ಜೋಡಿಸುತ್ತದೆ.

(2) ಮನಾಲಿ ಮತ್ತು ಲೇಹ್‌ಗಳನ್ನು ಜೋಡಿಸುತ್ತದೆ.

(3) ಕುಲು, ಲಾಹುಲ್ ಮತ್ತು ಸ್ಪಿಟಿ ಕಣಿವೆಗಳನ್ನು ಜೋಡಿಸುತ್ತದೆ.

(4) ಕಾಶ್ಮೀರ ಕಣಿವೆ ಮತ್ತು ಕಾರ್ಗಿಲ್‌ಗಳನ್ನು ಜೋಡಿಸುತ್ತದೆ.

42. ಈ ಕೆಳಗಿನ ಭಾರತದ ಯಾವ ಮಣ್ಣುಗಳನ್ನು ಉಷ್ಣವಲಯದ ಚೆರ್ನೋಜೆಮ್‌ಗಳೆಂದು ಕರೆಯುವರು?

(1) ಕಪ್ಪು ಮಣ್ಣು

(2) ಕೆಂಪು ಮಣ್ಣು

(3) ಜಂಬಿಟ್ಟಿಗೆ ಮಣ್ಣು

(4) ಮೆಕ್ಕಲು ಮಣ್ಣು

ಕಚ್ಚಾ ಕೆಲಸಕ್ಕೆ ಸ್ಥಳ

SHIKARAT.COM

39. 'Syzygy' means

(1) Sun, Moon and Earth are in straight line configuration

(2) Sun and Moon are in perpendicular position to Earth

(3) Sun, Moon and Earth configure according to size

(4) Size of celestial body and its gravitational pull

40. Statement I: Wind energy is cheapest, pollution-free, eco-friendly and can be developed away from the conventional sources.

Statement II: India ranks 4th in the world after China, USA and Germany with respect to wind energy production

Considering the above statements, choose the correct option:

(1) Statement I is correct but Statement II is incorrect

(2) Statement I is incorrect but Statement II is correct

(3) Both Statement I and Statement II are incorrect

(4) Both Statement I and Statement II are correct

41. The Banihal Pass connects which of the following regions?

(1) Connects Jammu and Srinagar

(2) Connects Manali and Leh

(3) Connects Kullu, Lahaul and Spiti Valley

(4) Connects Kashmir Valley and Kargil

42. Which type of soil in India is called as Tropical Chernozems?

(1) The Black soil

(2) The Red soil

(3) The Laterite soil

(4) The Alluvial soil

SPACE FOR ROUGH WORK

SHIKARAT.COM

A1

43. ಪಟ್ಟಿ-I ಅನ್ನು ಪಟ್ಟಿ-II ರ ಜೊತೆ ಹೊಂದಿಸಿ, ಸರಿಯಾದ ಉತ್ತರವನ್ನು ಆರಿಸಿ.

ಪಟ್ಟಿ-I (ಬಂದರುಗಳು)		ಪಟ್ಟಿ-II (ಗುರುತಿಸುವಿಕೆ)
(a) ಮುಂಬೈ ಬಂದರು	(i)	ನದಿ ಅಳಿವೆಯ ಬಂದರು
(b) ಕೋಲ್ಕತ್ತಾ ಬಂದರು	(ii)	ಅತೀ ದೊಡ್ಡ ಬಂದರು
(c) ಚೆನ್ನೈ ಬಂದರು	(iii)	ಕೃತಕ ಬಂದರು
(d) ನವ ಮಂಗಳೂರು ಬಂದರು	(iv)	ಹಳೆಯ ಬಂದರು

ಸಂಕೇತಗಳು:

(1) a – i, b – ii, c – iii, d – iv

(2) a – ii, b – i, c – iv, d – iii

(3) a – iv, b – i, c – ii, d – iii

(4) a – iii, b – iv, c – i, d – ii

44. ಪಟ್ಟಿ-I ಅನ್ನು ಪಟ್ಟಿ-II ರ ಜೊತೆ ಹೊಂದಿಸಿ, ಸರಿಯಾದ ಉತ್ತರವನ್ನು ಆರಿಸಿ.

ಪಟ್ಟಿ-I (ಅಲ್ಯುಮಿನಿಯಮ್ ಕಂಪೆನಿ)		ಪಟ್ಟಿ-II (ಕೈಗಾರಿಕೆಯ ಸ್ಥಾನೀಕರಣ)
(a) ಹಿಂಡಾಲ್ಕೋ	(i)	ಝಾರ್ಸುಗುಡಾ
(b) ನಾಲ್ಕೋ	(ii)	ಕೋರ್ಬಾ
(c) ಬಾಲ್ಕೋ	(iii)	ಅಂಗುಲ್
(d) ವೇದಾಂತ	(iv)	ರೇಣುಕೂಟ್

ಸಂಕೇತಗಳು:

(1) a – iv, b – iii, c – ii, d – i

(2) a – ii, b – i, c – iii, d – iv

(3) a – iii, b – iv, c – ii, d – i

(4) a – iv, b – i, c – ii, d – iii

ಕಚ್ಚಾ ಕೆಲಸಕ್ಕೆ ಸ್ಥಳ

SHIKARAT.COM

43. Match List – I with List – II and choose the correct answer:

List – I (Ports)	List – II (Identification)
(a) Mumbai Port	(i) Riverine Port
(b) Kolkata Port	(ii) Largest Port
(c) Chennai Port	(iii) Artificial Port
(d) New Mangalore Port	(iv) Oldest Port

Codes:

(1) a – i, b – ii, c – iii, d – iv

(2) a – ii, b – i, c – iv, d – iii

(3) a – iv, b – i, c – ii, d – iii

(4) a – iii, b – iv, c – i, d – ii

44. Match List – I with List – II and choose the correct answer:

List – I (Aluminium Company)	List – II (Location of Industry)
(a) Hindalco	(i) Jharsuguda
(b) NALCO	(ii) Korba
(c) BALCO	(iii) Angul
(d) Vedanta	(iv) Renukoot

Codes:

(1) a – iv, b – iii, c – ii, d – i

(2) a – ii, b – i, c – iii, d – iv

(3) a – iii, b – iv, c – ii, d – i

(4) a – iv, b – i, c – ii, d – iii

SPACE FOR ROUGH WORK

SHIKARAT.COM

A1

45. ಪಟ್ಟಿ-I ಅನ್ನು ಪಟ್ಟಿ-II ರ ಜೊತೆ ಹೊಂದಿಸಿ, ಸರಿಯಾದ ಉತ್ತರವನ್ನು ಆರಿಸಿ.

ಪಟ್ಟಿ-I (ಭೂಮಿಯ ಅಂತರಾಳ)		ಪಟ್ಟಿ-II (ನಿರ್ದಿಷ್ಟತೆಗಳು)
(a)	ಸಾಗರ ಕವಚ	(i) ಮಿಶ್ರಗೋಳ (ಮ್ಯಾಂಟಲ್)ದ ಕೆಳಪದರ
(b)	ಮೆಸೋಸ್ಪಿಯರ್	(ii) ಮಿಶ್ರಗೋಳ (ಮ್ಯಾಂಟಲ್)ದ ಹೊರಪದರ
(c)	ಭೂಖಂಡ ಕವಚ	(iii) ಭೂಕವಚದ ಅತ್ಯಂತ ತಳಭಾಗ
(d)	ಏಸ್ತನೋಸ್ಪಿಯರ್	(iv) ಸಿಯಾಲ್

ಸಂಕೇತಗಳು:

(1) a – i, b – ii, c – iii, d – iv

(2) a – iii, b – i, c – iv, d – ii

(3) a – iii, b – ii, c – iv, d – i

(4) a – iv, b – iii, c – i, d – ii

46. ಪಟ್ಟಿ-I ಅನ್ನು ಪಟ್ಟಿ-II ರ ಜೊತೆ ಹೊಂದಿಸಿ, ಸರಿಯಾದ ಉತ್ತರವನ್ನು ಆರಿಸಿ.

ಪಟ್ಟಿ-I (ವಾಯುಮಂಡಲದ ಪದರಗಳು)		ಪಟ್ಟಿ-II (ಪ್ರಮುಖ ಗುಣಲಕ್ಷಣಗಳು)
(a)	ಮಧ್ಯಗೋಳ	(i) ಭೂಮಿಯ ಕಡಿಮೆ ಗುರುತ್ವಾಕರ್ಷಣೆ ವಲಯ
(b)	ಪರಿವರ್ತನಾ ಗೋಳ	(ii) ಉಲ್ಕೆಗಳಿಂದ ಸಂರಕ್ಷಕ
(c)	ಆಯಾನು ಗೋಳ	(iii) ವಾಯುಮಂಡಲದ ಅತ್ಯಂತ ಶೀತ ಪದರ
(d)	ಬಾಹ್ಯ ಮಂಡಲ	(iv) ಹವಾಮಾನ ಉತ್ಪಾದಕ

ಸಂಕೇತಗಳು:

(1) a – iii, b – iv, c – ii, d – i

(2) a – ii, b – iii, c – iv, d – i

(3) a – iv, b – ii, c – i, d – iii

(4) a – i, b – iii, c – iv, d – ii

ಕಚ್ಚಾ ಕೆಲಸಕ್ಕೆ ಸ್ಥಳ

SHIKARAT.COM

45. Match List – I with List – II and choose the correct answer:

List – I (Earth's Interiors)	List – II (Specification)
(a) Ocean Crust	(i) Lower layer of the mantle
(b) Mesosphere	(ii) Outer part of the mantle
(c) Continental Crust	(iii) Lowest part of the crust
(d) Asthenosphere	(iv) Sial

Codes:

(1) a – i, b – ii, c – iii, d – iv

(2) a – iii, b – i, c – iv, d – ii

(3) a – iii, b – ii, c – iv, d – i

(4) a – iv, b – iii, c – i, d – ii

46. Match List – I with List – II and choose the correct answer:

List – I (Atmospheric Layers)	List – II (Major Characteristics)
(a) Mesosphere	(i) Layer of earth's weak gravity
(b) Troposphere	(ii) Protector from meteors
(c) Ionosphere	(iii) Coldest layer of atmosphere
(d) Exosphere	(iv) Weather manufacturer

Codes:

(1) a – iii, b – iv, c – ii, d – i

(2) a – ii, b – iii, c – iv, d – i

(3) a – iv, b – ii, c – i, d – iii

(4) a – i, b – iii, c – iv, d – ii

SPACE FOR ROUGH WORK

SHIKARAT.COM

A1

47. ಭಾರತದ ಭೂಕಂಪನ ಅಳೆಯುವ ಕೇಂದ್ರಗಳಿಗೆ ಸಂಬಂಧಿಸಿದಂತೆ ತಪ್ಪಾದ ಜೋಡಿಯನ್ನು/ಜೋಡಿಗಳನ್ನು ಗುರುತಿಸಿ.

(a) ಬೆಂಗಳೂರು - ಕರ್ನಾಟಕ

(b) ಪುಣೆ - ಮಹಾರಾಷ್ಟ್ರ

(c) ಕೊಡೈಕೆನಾಲ್ - ತಮಿಳುನಾಡು

(d) ಕೊಲ್ಕತ್ತಾ - ಪಶ್ಚಿಮ ಬಂಗಾಳ

ಈ ಕೆಳಗಿನ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ.

(1) (a) ಮತ್ತು (b) ಮಾತ್ರ (2) (c) ಮಾತ್ರ

(3) (b) ಮತ್ತು (d) ಮಾತ್ರ (4) (a) ಮಾತ್ರ

48. ಡಾ. ಪರಮಶಿವಯ್ಯ ವರದಿಯು ಇದಕ್ಕೆ ಸಂಬಂಧಿಸಿದೆ.

(1) ಜಲ ಸಂಪನ್ಮೂಲಗಳು ಮತ್ತು ಬರಗಾಲ

(2) ಪ್ರವಾಹಗಳು

(3) ಅಂತರರಾಜ್ಯ ಗಡಿಗಳು

(4) ಕೈಗಾರಿಕೆಗಳು

49. ಈ ಕೆಳಗಿನ ಕೃಷಿ ಪದ್ಧತಿಗಳನ್ನು ಪರಿಗಣಿಸಿ.

(a) ಬಯೋಡೈನಾಮಿಕ್ ಕೃಷಿ

(b) ಶಾಶ್ವತ (ಪರ್ಮಾಕಲ್ಚರ್)

(c) ಕಾನ್ಸಂಟ್ರೇಟೆಡ್ ಅನಿಮಲ್ ಫೀಡಿಂಗ್ ಆಪರೇಷನ್ಸ್ (CAFOs)

(d) ಫಾರ್ಮರ್ ಮ್ಯಾನೇಜ್ಡ್ ನ್ಯಾಚುರಲ್ ರಿಜನರೇಷನ್ (FMNR)

(e) ಏಕ ಬೆಳೆಯಾಧಾರಿತ ಕೈಗಾರಿಕಾ ಉತ್ಪಾದನೆ

ಈ ಮೇಲಿನ ಪದ್ಧತಿಗಳಲ್ಲಿ ಯಾವುವನ್ನು ಪರ್ಯಾಯ ಕೃಷಿ ಅಥವಾ ಸುಸ್ಥಿರ-ಕೃಷಿ ಪರಿಸರ ಪದ್ಧತಿಗಳ ವಿಧಾನಗಳಾಗಿ ಪರಿಗಣಿಸಲಾಗುತ್ತದೆ?

(1) (a), (b) ಮತ್ತು (d) (2) (a), (c) ಮತ್ತು (e)

(3) (b), (c) ಮತ್ತು (e) (4) (a), (b) ಮತ್ತು (c)

ಕಚ್ಚಾ ಕೆಲಸಕ್ಕೆ ಸ್ಥಳ

SHIKARAT.COM

47. Identify the incorrect pair/pairs regarding the earthquake monitoring centres of India:

(a) Bengaluru – Karnataka
(b) Pune – Maharashtra
(c) Kodaikanal – Tamil Nadu
(d) Kolkata – West Bengal

Choose the correct answer from the options given below:

(1) (a) and (b) only
(2) (c) only
(3) (b) and (d) only
(4) (a) only

48. Dr. Paramashivaiah Report is related to

(1) Water resources and drought
(2) Floods
